ಹಾಳಾದ್ದು ಇದೇನಾದರೂ ಅಪಶಕುನದ ಮಳೆಯಾ ಅನಿಸಿತು ಒಂದು ಕ್ಷಣ. ಗೊತ್ತಿರದ ವ್ಯಕ್ತಿಗಳೊಂದಿಗೆ ಜಗಳ ಮಾಡಬೇಕಾಗಿ ಬಂದುದು ಅಪಶಕುನವಲ್ಲದೆ ಮತ್ತೇನು ಅಂತಲೂ ಅನಿಸಿತು. ಆಮೇಲೆ ಮನೆ ನೆನಪಾಯಿತು. ಈ ಚಳಿಯಲ್ಲಿ, ಮಳೆಯಲ್ಲಿ ಬೈಕ್ ಮೇಲೆ ತೊಯ್ಸಿಕೊಂಡು ಹೋಗಬೇಕು. ಯಾವಾಗ? ಈಕೆ ಬಿಟ್ಟ ಮೇಲೆ ತಾನೆ.

ಕಾರು ಮಾಸಾಬ್ ಟ್ಯಾಂಕ್ ಸಿಗ್ನಲ್ ಹತ್ತಿರ ಬಂದು ಲೆಫ್ಟ್ ತೆಗೆದುಕೊಂಡ ಮೇಲೆ ಮತ್ತೆ ಶುರು ಹಚ್ಚಿದಳು.

'ಏನ್ರೀ... ನಿಮ್ಜೊತೆ ಮಾತಾಡಬಹುದಾ?' ಅಂದಳು ನಿಧಾನವಾಗಿ.

ಈಗ ಆಕೆಯ ದನಿ ತಣ್ಣಗೆ ಪ್ರಶಾಂತವಾಗಿತ್ತು. ಅದರಲ್ಲಿ ಏನೋ ಬೇಡಿಕೆ ಕೂಡ ಇರುವಂತೆ ಕಾಣಿಸಿತು.

ಆಕೆ ಹೇಳಿದಳು: 'ನೋಡಿ. ಅನ್ನಬೇಕಾದ ಮಾತುಗಳನ್ನೆಲ್ಲ ನೀವೇ ಅಂದಿರಿ. ನಿಮಗಿಂತ ಮೊದಲು ನಾನೇನಾದರೂ ಅಂದೆನಾ? ನಿಮ್ಮ ಮಾತುಗಳಿಗೆ ನನಗೇ ತಿಳಿಯದಂತೆ ಹಾರ್ಷ್ ಆಗಿ ರಿಯಾಕ್ಟ್ ಮಾಡಿದ್ದರೆ ಕ್ಷಮಿಸಿ. ಇನ್ನು ಈ ವಿಷಯವನ್ನು ಇಷ್ಟಕ್ಕೇ ಬಿಟ್ಟುಬಿಡೋಣ. ನೋಡಿ... ನಿಜವಾಗಿ ಎಂದರೆ ಇವತ್ತು ನಿಮ್ಮೊಂದಿಗೆ ತುಂಬಾ ವಿಷಯಗಳನ್ನು ಮಾತಾಡಬೇಕೆಂದು, ನನ್ನ ಫೀಲಿಂಗ್ಸ್ ಶೇರ್ ಮಾಡಿಕೊಳ್ಳೋಣವೆಂದು ಅಂದುಕೊಂಡು ಬಂದಿದ್ದೆ. ಆದರೆ ಮತ್ತೆ ನೀವು ಏನಾದರೂ ಅಂದುಕೊಳ್ಳುತ್ತೀರೇನೋ ಅಂದುಕೊಂಡು ಆ ಪ್ರಯತ್ನಾನ ಅಲ್ಲಿಗೇ ಬಿಟ್ಟುಬಿಟ್ಟೆ. ಈಗ ಇಷ್ಟೆಲ್ಲ ಆದ ಮೇಲೆ ಇನ್ನು ಮಾತಾಡದೆ ಇರಲಾರೆ. ನನ್ನ ಮಾತುಗಳನ್ನು ಕೇಳಿಸಿಕೊಳ್ತೀರಾ? ಪ್ಲೀಸ್.'

ನಾನು ಮಾರುತ್ತರ ಕೊಡಲಿಲ್ಲ.

ಆಕೆ ಎರಡು ಮೂರು ನಿಮಿಷಗಳ ನಂತರ ನಿಧಾನಕ್ಕೆ ತನ್ನ ಕತೆ ಹೇಳಲು ಶುರು ಮಾಡಿದಳು.

ಆದರೆ ಆಕೆಯಿಂದ ಪ್ರಾರಂಭಿಸಿ ಅಲ್ಲ, ಆಕೆಯ ಅಪ್ಪನಿಂದ ಪ್ರಾರಂಭಿಸಿ.

'ನಿಮಗೆ ನಮ್ಮ ಊರಿನ ಪರಿಚಯವಿದೆಯಾ? ಇಲ್ಲದಿದ್ದರೆ ಯಾವಾಗಾದರೂ ನಮ್ಮೂರಿನ ಹಿರಿಯರು ಭೇಟಿಯಾದಾಗ ನಮ್ಮಪ್ಪನ ಹೆಸರು ಹೇಳಿ ಅವರ ಬಗ್ಗೆ ಕೇಳಿ ಹೇಳ್ತಾರೆ. ನಮ್ಮಪ್ಪ ಒಬ್ಬ ಡಾಕ್ಟರ್. ಎಲ್ಲರೂ ಅವರ ಕೈಗುಣ ಒಳ್ಳೆಯದೆಂದು, ಅವರು ಔಷಧಿ ಕೊಟ್ಟರೆ ಟಕ್ಕನೆ ರೋಗ ವಾಸಿಯಾಗುವುದೆಂದು ಮ್ಯಾಜಿಕ್ ಡಾಕ್ಟರ್ ಅಂತ ಕರೆಯೋರು. ಕೆಲವರು ಮಾತ್ರ ಸಲಿಗೆಯಿಂದ ಹಜಾಮರ ಡಾಕ್ಟರ್ ಅನ್ನೋರು. ಹಜಾಮರು ಅಂದ್ರೆ ಗೊತ್ತಲ್ಲ ಅದು ನಮ್ಮ ಜಾತಿ.

ನಮ್ಮ ತಾತ ಬಾರ್ಬರ್. ರೆಡ್ಡಿಗಳಿಗೆ ಕ್ಷೌರ ಮಾಡುತ್ತ, ವರ್ಷ ಪೂರ್ತಿ ಅವರ ಸೇವೆಗಳನ್ನು ಮಾಡುತ್ತ ದೊಡ್ಡ ಹಬ್ಬಕ್ಕೊಂದು ಸಾರಿ ಅವರು ಕೊಡೋ ದವಸ ಧಾನ್ಯದಿಂದ ಸಂಸಾರ ನಡೆಸೋರಂತೆ ಆತ. ರೆಡ್ಡಿಗಳ ಹತ್ತಿರ ಕೆಲಸವಿಲ್ಲದಾಗ, ಖಾಲಿ ಸಮಯ ಸಿಕ್ಕಾಗ ಚಿಲ್ಲರೆ ಕಾಸು ಸಿಗುತ್ತಲ್ಲ ಅಂತ ಯಾವಾಗಲಾದರೂ ಹಡಪದ ಪೆಟ್ಟಿಗೆ ತೆಗೆದುಕೊಂಡು, ನಮ್ಮಪ್ಪನ ಕೈ ಹಿಡಿದುಕೊಂಡು ಹಳ್ಳಿಗಳಿಗೆ ಹೋಗೋರಂತೆ ಬಾರ್ಬರ್ ಕೆಲಸಕ್ಕೆ. ದಾರಿಯಲ್ಲಿ ಯಾರು ಕರೆದರೆ ಅವರಿಗೆ, ಎಲ್ಲಿ ಕೂರಲು ಸ್ಥಳ ಸಿಕ್ಕರೆ ಅಲ್ಲಿ ಅವರು ಆ ಕೆಲಸ ಮಾಡೋರಂತೆ. ಅದನ್ನು ಹೇಗಾದರೂ ನಮ್ಮ ತಂದೆಯವರಿಗೂ ಕಲಿಸಬೇಕು ಅಂತ ಅವರ ಆಶೆ. ನಮ್ಮ ತಂದೆ ಕೂಡಾ ಕಲಿತುಕೊಳ್ಳೋರೇನೋ. ಆದರೆ ಒಂದು ಸಲ ಒಂದು ಘಟನೆ ನಡೀತು.

ನಮ್ಮ ತಾತ ಒಂದು ಊರಲ್ಲಿ ಕ್ಷೌರ ಮಾಡಿ ಹೊತ್ತಾಯಿತು ಅನ್ನೋ ದಿಗಿಲಿನಲ್ಲಿ ಕತ್ತರಿಸಿ